**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 1378/2018

ಪಿ.ಡಬ್ಲ್ಯೂ - 5

ಸಿ.ಡಬ್ಲ್ಯೂ - 11

| | | |
|---|---|---|
| ಹೆಸರು | : | ಆಕಾಶ ಕಲ್ಲಪ್ಪ ತಳವಾರ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಛಾಯಾಗ್ರಾಹಕರು |
| ವಾಸ | : | ಖಾನಾಪುರ |

ದಿನಾಂಕ 13-10-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ದಿಃ 23.03.2017 ರಂದು ಸಂಜೆ 4.30 ಗಂಟೆ ಸಮಯದಲ್ಲಿ ನನಗೆ ಪೋಲೀಸರು ಕರೆ ಮಾಡಿ ಸ್ವಲ್ಪ ಕೆಲಸ ಇದೆ, ಠಾಣೆಗೆ ಬನ್ನಿ ಎಂದು ಹೇಳಿದರು. ನಾನು ಠಾಣೆಗೆ ಹೋದ ಮೇಲೆ ನನಗೆ ಜಾಂಬೋಟಿ ಕ್ರಾಸಗೆ ಕರೆದುಕೊಂಡು ಹೋಗಿರುತ್ತಾರೆ. ಗಾಡಿ ಹಾಗೂ ಬಂಗಾರದ ಬಗ್ಗೆ ಫೋಟೋ ತೆಗೆಯಬೇಕೆಂದು ಹೇಳಿದ್ದರಿಂದ ನಾನು ಫೋಟೋ ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ತೆಗೆದ ನಂತರ ಅವುಗಳನ್ನು ತೊಳೆಸಿ ಫೋಟೋ ಹಾಗೂ ಸಿಡಿ ಯನ್ನು ನಾನು ಪೋಲೀಸರಿಗೆ ನೀಡಿರುತ್ತೇನೆ. ಸಾಕ್ಷಿದಾರರು ಈಗ ಎರಡು ಫೋಟೋಗಳನ್ನು ನೋಡಿ ಹಾಗೂ ಈಗಾಗಲೇ ಗುರುತಿಸಿರುವ ನಿಪಿ 7 ಮತ್ತು 8 ಫೋಟೋಗಳನ್ನು ನೋಡಿ ಸದರಿ ಫೋಟೋಗಳನ್ನು ನಾನೇ ಆಗ ತೆಗೆದಿದ್ದವು ಎಂದು ನುಡಿಯುತ್ತಾರೆ. ಇನ್ನುಳಿತ ಫೋಟೋಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು. ಎರಡು ಸಿಡಿಗಳನ್ನು ನಿಪಿ-13 ಮತ್ತು 14 ಎಂದು

ಗುರುತಿಸಲಾಯಿತು. ಸಾಕ್ಷಿದಾರರಿಗೆ ಆರೋಪಿತರನ್ನು ವಿಸಿಯಲ್ಲಿ ತೋರಿಸಿಲಾಯಿತು. ಸಾಕ್ಷಿದಾರರು ನಿಪಿ7 ಮತ್ತು 8 ರಲ್ಲಿರುವ ಆರೋಪಿತರು ಅವರೇ ಎಂದು ನುಡಿಯುತ್ತಾರೆ. (ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ದಿಃ23.12.2017 ರಂದು ಸಂಜೆ 4.30 ಗಂಟೆಗೆ ಚಾಸಾ 19 ರವರು ನನ್ನನ್ನು ಪೊಲೀಸ ಠಾಣೆಗೆ ಕರೆಸಿದರು ಎಂದು ಸೂಚಿಸಿದರೆ ಸರಿ . ನಂತರ ಅಲ್ಲಿಂದ ಜಾಂಬೋಟಿ ಕ್ರಾಸಿಗೆ ಕರೆಸಿದರು ಎಂದು ಸೂಚಿಸಿದರೆ ಸರಿ . ಆರೋಪಿತರು ಕಳುವು ಮಾಡಿದ ಮೋಟರ ಸೈಕಲ ಹಾಗೂ ಕಳುವು ಮಾಡಲು ಉಪಯೋಗಿಸುತ್ತಿದ್ದ ಸಲಕರಣೆಗಳನ್ನು ಆರೋಪಿತರಿಂದ ಪೊಲೀಸರು ಜಪ್ತ ಪಡಿಸಿಕೊಂಡರು ಎಂದು ಸೂಚಿಸಿದರೆ ಸರಿ . ಸಿಕ್ಕಿದ ಬಂಗಾರಗಳನ್ನು ಜಪ್ತ ಮಾಡುವಾಗ ಫೊಟೋ ತೆಗೆದು ಸಿಡಿ ಮಾಡಿಕೊಟ್ಟಿರುತ್ತೇನೆ ಎಂದು ಸೂಚಿಸಿದರೆ ಸರಿ . ಸಾಕ್ಷಿದಾರರು ನಿಪಿ-10 ನ್ನು ನೋಡಿ ಗುರುತಿಸಿ, ಸದರಿ ಫೊಟೋವನ್ನು ನಾನೇ ತೆಗೆದಿರುತ್ತೇನೆಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎನ್ ವಾಯ ಎಂ ವಕೀಲರಿಂದಃ

ಈ ಪ್ರಕರಣದಲ್ಲಿರುವ ಫೊಟೋವನುನ ತೆಗೆಯಲು ಪೊಲೀಸರೇ ನನ್ನನ್ನು ಕರೆಯಿಸಿದ್ದರು ಎಂದು ಸೂಚಿಸಿದರೆ ಸರಿ . ಸದರಿ ಫೊಟೋಗಳನ್ನು ತೆಗೆಯಲು ಲೈಸೆನ್ಸ ಬೇಕೆಂದು ಸೂಚಿಸಿದರೆ ಸರಿ . ನನ್ನದು ಲೈಸೆನ್ಸ ಇರುವುದಿಲ್ಲ. ನಾನು ಈ ಪ್ರಕರಣದಲ್ಲಿ ನೀಡಿರುವ ಫೊಟೋಗಳನ್ನು ತೆಗೆಯಲು ಎಷ್ಟು ಜಿಬಿ ಉಪಯೋಗಿಸಿದ್ದೇನೆ ಎಂದು ಮಾಹಿತಿ ನೀಡಿಲ್ಲ. ನನಗೆ ಆರೋಪಿತರು ಏನು ಮಾಡಿದರೆಂದು ಗೊತ್ತಿಲ್ಲ ಎಂದು ಸೂಚಿಸಿದರೆ ಸರಿ . ಪೊಲೀಸರು ಫೊಟೋ ತೆಗಿ ಎಂದು ಹೇಳಿದ್ದರಿಂದ ಫೊಟೋ ತೆಗೆದಿದ್ದೆನೆ ಎಂದು

ಸೂಚಿಸಿದರೆ ಸರಿ . ಆರೋಪಿತರನ್ನು ಪೊಲೀಸರು ನಿಲ್ಲಿಸಿದರು, ನಾನು ಫೋಟೋ ತೆಗೆದೆಅಷ್ಟು ಬಿಟ್ಟು ನನಗೆ ಬೇರೆನು ಗೊತ್ತಿಲ್ಲ ಎಂದು ಸೂಚಿಸಿದರೆ ಸರಿ . ಕಳ್ಳತನ ಮಾಡಲು ಉಪಯೋಗಿಸುತ್ತಿರುವ ಸಲಕರಣೆಗಳು ಎಂದು ಹೇಳುತ್ತಿರುವ ವಸ್ತುಗಳನ್ನು ಯಾರು ಹಾಜರು ಪಡಿಸಿದರೆಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ದಿವಸ ನಾನು ಫೋಟೋ ತೆಗೆದಿಲ್ಲ, ಬೇರೆ ಯಾರೋ ತೆಗೆದ ಫೋಟೋ ಹಾಗೂ ಸಿಡಿಗಳ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ.

1ನೇ ಆರೋಪಿತರ ಪರ ವಕೀಲರು ಮೆಲೀನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.